# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/227/12-13

ದಿನಾಂಕ :16-08-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| **ವಾದಿಗಳು** | **ಪ್ರತಿವಾದಿಗಳು** |
|---|---|
| ಶ್ರೀ ಅಜಯ್ ಎಂ ಘೋರ್ಪಡೆ ತಂದೆ ಎಂ ವೈ ಘೋರ್ಪಡೆ, ಶಿವಪುರ, ಸಂಡೂರು<br><br>**ಶ್ರೀ ಡಿ. ಮಹೇಂದ್ರನಾಥ ಮತ್ತು ಹೆಚ್. ಬಿ. ರಾಜಶೇಖರ, ವಕೀಲರು, ಬಳ್ಳಾರಿ** | 1. ತಹಶೀಲ್ದಾರರು, ಸಂಡೂರು<br>2. ಶ್ರೀ ಬಿ. ವಿ. ಕುಂಟೆ, ಶಿವತೀರ್ಥ, ಮನೆ ನಂ 219, ವಾರ್ಡ್ ನಂ 14, ಪ್ಲಾಟ್ ನಂ 11, ಕೆ. ಹೆಚ್. ಬಿ. ಕಾಲೋನಿ, ಸಂಡೂರು<br>3. ಶ್ರೀ ಶೈಲೇಶ್ ಎಲ್ ದಳವಿ, 1461/ಬಿ. ಗೋಕುಲ್ ವಾಡಿ, ದೇಸಾಯಿ ನಗರ, ಸ್ಯಾಕ್ಲಿಂ, ಗೋವಾ |

**ದಾವಾ ಜಮೀನಿನ ವಿವರ :-**

| **ತಾಲ್ಲೂಕು** | **ಗ್ರಾಮ** | **ಸ. ನಂ.** | **ವಿಸ್ತೀರ್ಣ (ಎಕರೆಗಳಲ್ಲಿ)** |
|---|---|---|---|
| ಸಂಡೂರು | ಸಂಡೂರು | 167/1, 167/4, 238/8, 232, 236, 237 | 2.02, 0.22, 5.78, 1.35, 0.64, 1.65 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ತಹಶೀಲ್ದಾರರು, ಸಂಡೂರು ಇವರ ಆದೇಶ ಸಂ/ಕಂ/ಪಹಣಿ/ಹಬವಿವಾದ/61/2011-12 ದಿನಾಂಕ 25/06/2012 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 12-11-2013, 28-07-2015, ಮತ್ತು 16-08-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರು ಮುಖಾಂತರ ದಿನಾಂಕ: 30-07-2012 ರಂದು ಈ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸುತ್ತಾ , ಪ್ರತಿವಾದಿ (1) ರವರ ದಿನಾಂಕ 25-06-2013 ರ ಆದೇಶವನ್ನು ರದ್ದುಗೊಳಿಸಿ ಸಂಡೂರು ತಾಲ್ಲೂಕಿನ ಸಂಡೂರು ಗ್ರಾಮದ ಸ.ನಂ 167/1 ವಿಸ್ತೀರ್ಣ 2.02, 167/4 ವಿಸ್ತೀರ್ಣ 0.22 , 70 ವಿಸ್ತೀರ್ಣ 0.35,ಎಕರೆ ಸದರಿ ಜಮೀನುಗಳು ಪ್ಯಾಲೇಸ್ ಎಸ್ಟೇಟ್‌ನ ಭಾಗವಾಗಿದ್ದು ಸದರಿ ಜಮೀನುಗಳನ್ನು ವಾದಿ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಪ್ರತಿವಾದಿ (1) ರವರಿಗೆ ನಿರ್ದೇಶಿಸಬೇಕೆಂದು ಕೋರಿರುತ್ತಾರೆ. ಮತ್ತು ಸ,ನಂ 238/8,ವಿಸ್ತೀರ್ಣ 5.78 ಎಕರೆ, ಸ.ನಂ 232,ವಿಸ್ತೀರ್ಣ 1.35, ಸ.ನಂ , 237 ವಿಸ್ತೀರ್ಣ: 1.65 ಸ.ನಂ 236 ವಿಸ್ತೀರ್ಣ 0.64 ಎಕರೆ ಜಮೀನುಗಳನ್ನು ಭರ್ಹೀಜಿ ಎ. ಘೋರ್ಪಡೆ ಇವರ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಲು ಪ್ರತಿವಾದಿ (1) ರವರಿಗೆ ನಿರ್ದೇಶಿಸಬೇಕೆಂದು ಕೋರಿರುತ್ತಾರೆ.

ಪ್ರಕರಣಕ್ಕೆ ಸಂಬಮಧಿಸಿದಂತೆ ಪ್ರತಿವಾದಿ (2) ರವರು ಮೇಲ್ಮನವಿಗೆ ಆಕ್ಷೇಪಣೆಗಳನ್ನು ಸಲ್ಲಿಸುತ್ತಾ ದಿವಂಗತ ರಾಜಮಾತೆ ಶ್ರೀಮತಿ ಸುಶೀಲದೇವಿ ಘೋರ್ಪಡೆಯವರ ಮೃತ್ಯು-ಪತ್ರ ದ ಪ್ರಕಾರ ಅವರ ಪಿತಾರ್ಜಿತ ಆಸ್ತೀಯನ್ನು ನಿರ್ವಹಿಸಿಕೊಂಡು ಸಂರಲಕ್ಷಿಸಿಕೊಳ್ಳಲು ವಾದಿಸಮೇತ ಎಲ್ಲಾ ವಾರುದಾರರಿಗೆ ನ್ಯಾಯಯುತವಾದ ಸಮಾನದಹಕ್ಕು ಮತ್ತು ಅಧಿಕಾರವನ್ನು ದೊರಕಿಸಿಕೊಡಬೇಕೆಂದು ಕೋರಿರುತ್ತಾರೆ. ಪ್ರಕರಣವು ಮೃತ್ಯು-ಪತ್ರ ಆಧರಿಸಿ ಹಕ್ಕುದಾಖಲೆ ಮಾಡಿಕೊಡಲು ಕೊಡಲು ಕೋರಿದ್ದು , ವಿಲ್ ನೋಂದಾಯಿತ ವಾಗಿದ್ದಾಗಲಿ ಅಥವಾ ನೋಂದಾಯಿತ ವಲ್ಲದ ವಿಲ್ ಇರಲಿ ಅದರ ಸಿಂಧುತ್ವ , ಕ್ರಮ ಬದ್ಧತೆಯನ್ನು ಕೇವಲ ದಿವಾನಿ ನ್ಯಾಯಾಲಯ ಮಾತ್ರ ನಿರ್ಧರಿಸುವ ಅಧಿಕಾರವ್ಯಾಪ್ತಿ ಹೊಂದಿರುತ್ತದೆ. ಕಾರಣ ದಿನಾಂಕ 25-06-2012 ರಂದು ಪ್ರತಿವಾದಿ (1) ರವರು ಮಾಡಿರುವ ಆದೇಶವು ಸೂಕ್ತವಿರುವುದರಿಂದ, ಪ್ರಕರಣವು ಸಿವೀಲ್ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವುದರಿಂದ ಈ ನ್ಯಾಯಾಲಯದಲ್ಲಿ ವಿಚಾರಣೆ ನೆಡೆಸುವುದು ಸೂಕ್ತವಲ್ಲವೆಂದು ಮನವರಿಕೆ ಯಾಗಿರುವುದರಿಂದ ಮೇಲ್ಮನವಿಯನ್ನು ಈ ಹಂತದಲ್ಲಿಯೇ ವಜಾಗೊಳಿಸಿ ಆದೇಶಿಸುವ ಈ ಕೆಳಕಂಡ ಆದೇಶ.

:: ಆದೇಶ ::

**ಮೇಲ್ಮನವಿಯನ್ನು ವಜಾಗೋಳಿಸಿದೆ.**

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ತಹಶೀಲ್ದಾರರು ಸಂಡೂರು ಇವರ ಆದೇಶ ಸಂಖ್ಯೆ ಕಂ/ಪಹಣಿ/ಹಬವಿವಾದ/61/2011-12 ದಿನಾಂಕ ರ ಆದೇಶವನ್ನು ಎತ್ತಿಹಿಡಿದಿದೆ. ಸಂಡೂರು ತಾಲ್ಲೂಕಿನ ಸಂಡೂರು ಗ್ರಾಮದ ಸ.ನಂ 167/1, 167/4, 238/8, 232, 236, 237 ವಿಸ್ತೀರ್ಣ: 2.02, 0.22, 5.78, 1.35, 0.64, 1.65 ಎಕರೆ ಜಮೀನಿಗೆ ಸಂಬಂಧಿಸಿದಂತೆ ಮೇಲ್ಮನವಿಯನ್ನು ಇದೇ ಹಂತದಲ್ಲಿ ವಜಾ ಮಾಡಿ ಆದೇಶಿಸಲಾಗಿದೆ.

ಈ ಆದೇಶವನ್ನುಹೇಳಿ, ಬರೆಯಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: **16-08-2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ.

**ಪ್ರತಿಯನ್ನು :** ತಹಶೀಲ್ದಾರರು ಸಂಡೂರು ಇವರಿಗೆ ಮೂಲಕಡತ ಸಂಖ್ಯೆ ಕಂ/ಪಹಣಿ/ಹಬವಿವಾದ/61/2011-12 ದಿನಾಂಕ 25-06-2012 ರ ಮೂಲ ಕಡತವನ್ನು ಕಳುಹಿಸದೆ.